**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 02.12.2025**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ವಿ ಕೆ ವಕೀಲರಿಂದ**

ನಾನು ಮೂರನೇ ತರಗತಿಯರವೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಕೂಲಿ ಕೆಲಸ ಮಾಡಿತ್ತಿರುತ್ತೇನೆ. ನಾನು ಚಟ್ಟಳ್ಳಿ ಫಾರಮನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಚಟ್ಟಳ್ಳಿ ಖಾಸಗಿ ಎಸ್ಟೇಟ್ ನಲ್ಲಿ ಸುಮಾರು 35 ವರುಷಗಳಿಂದ ಕೆಲಸ ಮಾಡುತ್ತಿದ್ದೆ ಎಂದು ನುಡಿದರು. ಡೆಲ್ ಕೊರನ್ ಎಸ್ಟೇಟ್ ನಲ್ಲಿ ಕೆಲಸ ಮಾಡಿತ್ತೀರುತ್ತೇನೆ. ಅಂದಾಜು 300 ಎಕರೆ ಡೆಲ್ ಕೊರನ್ ಎಸ್ಟೇಟ್ ಇರುತ್ತದೆ. ನಾನು ಸದರಿ ತೋಟದ ಖಾಯಂ ಕಾರ್ಮಿಕರ ಪಟ್ಟಿಯಲ್ಲಿರುತ್ತೇನೆ ಎಂದರೆ ಸರಿ . ನನಗೆ ತೋಟದವರು ಲೈನ್ ಮನೆಯ ವ್ಯವಷ್ಥೆ ಒದಗಿಸಿರುತ್ತಾರೆ. ಕಳೆದ 3 ವರುಷದ ತನಕ ನಾನು ಲೈನ್ ಮನೆಯಲ್ಲಿ ವಾಸವಾಗಿದ್ದೆ. ಈಗ 3 ವರುಷಗಳಿಂದ ನನ್ನ ಸ್ವಂತ ಮನೆಗೆ ಬಂದು ಹೋಗಿ ಮಾಡುತ್ತೇನೆ. ನಮ್ಮ ತಂದೆಗೆ ನಾವು 3 ಜನ ಮಕ್ಕಳು. ನನ್ನನ್ನು ಹೊರತುಪಡಿಸಿ ಒಬ್ಬ ತಮ್ಮ ತಂಗಿ ಇದ್ದಾರೆ. ನನ್ನ ತಂದೆ ಮುರುಗನ್ ರವರು ಒಂದು ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದರು ಎಂದರೆ ಸರಿ . ಸದರಿ ಪ್ರಕರಣದಲ್ಲಿ ಅವರಿಗೆ ಜೈಲು ವಾಸವಾಗಿ ಶಿಕ್ಷೆಯನ್ನು ಅನುಭವಿಸಿದರು ಎಂದರೆ ಸರಿ . ಯಾವ ವರ್ಷದಲ್ಲಿ ನನ್ನ ತಂದೆ ಜೈಲಿನಿಂದ ಬಿಡುಗಡೆಗೊಂಡರು ಎಂದು ನನಗೆ ಗೊತ್ತಿಲ್ಲ. ಬಿಡುಗಡೆಯಾಗಿ ಸ್ವಲ್ಪ ದಿನದಲ್ಲಿ ನನ್ನ ತಂದೆ ತೀರಿಹೋಗಿರುತ್ತಾರೇ ಎಂದರೆ ಸರಿ .

ದಿಃ 22.02.1990 ರಲ್ಲಿ ಸರ್ವೆ ನಂ 105/19 ರಲ್ಲಿ ವಿಸ್ತೀರ್ಣ 50 ಸೆಂಟ್ಸ ಗಳನ್ನು ಖರೀದಿ ಮಾಡಿದ್ದರು. ನನ್ನ ತಂದೆ ಖರೀದಿ ಮಾಡಿದ ಆಸ್ತಿಯ ಚೆಕ್ಕು ಬಂಧಿ ನನಗೆ ಗೊತ್ತಿಲ್ಲ. ದಿಃ 22.10.1991 ರಲ್ಲಿ ನನ್ನ ತಾಯಿ ಸರ್ವೆ ನಂ 105/198 ರಲ್ಲಿ 38 ಸೆಂಟ್ಸ ಗಳನ್ನು ಖರೀದಿ ಮಾಡಿರುತ್ತಾರೆ . ನನ್ನ ತಾಯಿ ಖರೀದಿ ಮಾಡಿದ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ತಂದೆ ಬಿ ಬಿ ಎಂಬುವವರಿಂದ ಖರೀದಿ ಮಾಡಿರುತ್ತಾರೆ. ಮತ್ತು ನನ್ನ ತಾಯಿಯವರು 1 ನೇ ಪ್ರತಿವಾದಿಯಾದ ಸಿದ್ದಯ್ಯ ರವರಿಂದ ಖರೀದಿ ಮಾಡಿರುತ್ತಾರೆ. ನನ್ನ ತಂದೆಯವರು ಆಸ್ತಿಯನ್ನು ಖರೀದಿ ಮಾಡುವ ಸರ್ವೆ ನಂಬರ 105/19 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಖರೀದಿ ಮಾಡುವ ಸಂಬಂದರ್ದಲ್ಲಿ ಸರ್ವೆ ನಂ 105/19 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ದಿಃ 23.10. 2003 ರಲ್ಲಿ 10 ಸೆಂಟ್ಸ ಜಾಗವನ್ನು ಸರ್ವೆ ನಂ 105/19 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಸ್ವತ್ತಿನಲ್ಲಿ ಒಟ್ಟ 12 ಸೆಂಟ್ಸ ಜಾಗವಿದ್ದು ನಾನು 10 ಸೆಂಟ್ಸ ಖರೀದಿ ಮಾಡಿರುತ್ತೇನೆ.

ನಾನು ಖರೀದಿ ಮಾಡಿದ ಸ್ವತ್ತಿನ ಚೆಕ್ಕುಬಂದಿಯ ವಿವರಗಳನ್ನು ಹೇಳಲು ಬರುತ್ತಿಲ್ಲ. ನಾನು ಮತ್ತು ನನ್ನ ತಾಯಿ ಒಟ್ಟು 48 ಸೆಂಟ್ಸಗಳನ್ನು ಪ್ರತಿವಾದಿಯರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿ . ನಾನು ಖರೀದಿ ಮಾಡಿದ ಸರ್ವೆ ನಂ 105/19 ಈಗ ಹೊಸ ಸರ್ವೆ ನಂಬರಾಗಿರುತ್ತದೆ ಎಂದರೆ ಸರಿ . ನಿಪಿ 20 ರಲ್ಲಿ ಉತ್ತರ ದಿಕ್ಕಿಗೆ ಕಾಲುದಾರಿ ಇದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ . ನಿಪಿ 21 ರ ಪ್ರಕಾರ ನಾನು ಖರೀದಿ ಮಾಡಿದ ಸ್ವತ್ತಿನ ದಕ್ಷಿಣ ಭಾಗಕ್ಕೆ ಖರೀದಿದಾರರ ಜಾಗ ಎಂದು ಇದ್ದು ಸದರಿ

ಜಾಗದ ಸರ್ವೆ ನಂಬರ 105/19 ಆಗಿರುತ್ತದೆ. ನಿಪಿ 21 ರ ಪ್ರಕಾರ ನಾನು ಖರೀದಿ ಮಾಡಿದ ಜಾಗಕ್ಕೆ ಸಂಪರ್ಕ ಕಲ್ಪಿಸುವಂತ ಯಾವುದೆ ಜಾಗ ಇರುವುದಿಲ್ಲ ಎಂದರೆ ಸರಿ . ಉಳಿದ 2 ಸೆಂಟ್ಸಗಳು ಪ್ರತಿವಾದಿ 1 ರವರ ಹೆಸರಿನಲ್ಲಿರುತ್ತದೆ . ಉಳಿದ 2 ಸೆಂಟ್ಸ ಜಾಗ ಉಚ್ಚಮ್ಮರವರ ಹೆಸರಿನಲ್ಲೂ ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿ 1 ರವರ ತಾಯಿ ಎಂದು ನುಡಿದರು. ನಾನು ನನ್ನ ವಾದ ಪತ್ರದಲ್ಲಿ ಉಚ್ಚಮ್ಮರವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದು ಈಗ ಪ್ರತಿವಾದಿ 1 ರವರ ತಾಯಿ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ಮತ್ತು 2 ರವರು ಈಗ ಬದುಕಿರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರಿಗೆ ಒಟ್ಟು 3 ಮಕ್ಕಳು ಇರುತ್ತಾರೆ. ಅವರುಗಳ ಹೆಸರು ರೋಹಿಣಿ , ಧರಣಿ, ಭವ್ಯರವರು ಪ್ರತಿವಾದಿ 1 ಮತ್ತು 2 ರವರ ಮಕ್ಕಳಾಗಿರುತ್ತಾರೆ. ನಾನು ನನ್ನ ತಾಯಿ ಮತ್ತು ತಂದೆ ಒಟ್ಟು 98 ಸೆಂಟ್ಸಗಳನ್ನು ಖರೀದಿ ಮಾಡಿರುತ್ತೇನೆ. ನಮ್ಮ ಆಸ್ತಿ ದಾಟಿ ಮುಂದಕ್ಕೆ ಮತಾಯಿ ಎಂಬುವವರ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಮತಾಯಿ ರವರು ನಮ್ಮ ಆಸ್ತಿ ದಾಟಿ ಮುಂದಕ್ಕೆ ಇರುತ್ತಾರೆ ಆದರೆ ಅಲ್ಲಿ ಆಸ್ತಿ ಇದೆಯೋ ಇಲ್ಲಮೋ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 1 ಮತ್ತು ಮತಾಯಿ ಎಂಬುವವರ ಮಧ್ಯೆ ರಸ್ತೆ ವಿಚಾರಕ್ಕೆ ಒಂದು ದಾವೆ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಆಸ್ತಿಗೆ ತಾಗಿಕೊಂಡಂತೆ ಮತಾಯಿರವರು ಇತ್ತೀಚಿಗೆ ಒಂದು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಭರಡಿಯಿಂದ ಹೋಗಬೇಕಾದರೆ ಪ್ರತಿವಾದಿ 1 ರವರ ಆಸ್ತಿಯನ್ನು ದಾಟಿ ಹೋಗಬೇಕು ಎಂದರೆ ಸಾಕ್ಷಿಯು 2 ಕಡೆ ದಾರಿ ಇದ್ದು ಒಂದು ಕಡೆಯಿಂದ ಹೋಗಬೇಕಾದರೆ ಪ್ರತಿವಾದಿ

1 ರವರ ಆಸ್ತಿಯನ್ನು ದಾಟಿ ಹೋಗಬೇಕು ಎಂದು ನುಡಿದರು. ಭರಡಿಯಿಂದ ಪಂಚಾಯಿತಿ ರಸ್ತೆಯಿದ್ದು ಅಲ್ಲಿಂದ ನಮ್ಮ ಜಾಗಕ್ಕೆ ಹೋಗುತ್ತೇನೆ . ಸರ್ವೆ ನಂ 105/19 ರಲ್ಲಿ ಪಂಚಾಯಿತಿ ರಸ್ತೆ ಬರುತ್ತದೆ. ಪಂಚಾಯಿತಿ ರಸ್ತೆಗೆ ತಾಕಿಕೊಂಡಂತೆ 3 ಮನೆಗಳು ಇರುತ್ತವೆ ಎಂದರೆ ಸರಿಯಲ್ಲ.

ಸಿದ್ದಯ್ಯರವರ ಮಗಳಾದ ರೋಹಿಣಿ ಒಂದೇ ಮನೆಯಲ್ಲಿ ವಾಸವಾಗಿರುತ್ತಾರೆ. ಪ್ರತಿವಾದಿ 1 ರವರು ಬದಕಿದ್ದ ಕಾಲದಲ್ಲಿ ಅವರು ಸರ್ಕಾರಿ ಜಾಗವನ್ನು ಸರ್ವೆ ನಂ 105/10 ರಲ್ಲಿ ಅಂದಾಜು 2 ಎಕರೆ ಪೈಸಾರಿ ಜಾಗವನ್ನು ಅತಿಕ್ರಮಸಿ ಒಂದೆ ಮನೆಯನ್ನು ಕಟ್ಟಿಕೊಂಡು ಕೃಷಿ ಮಾಡಿಕೊಂಡು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಸಂಬಂದಪಟ್ಟಂತೆ ಫಾರಮ ನಂ 57 ನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 105/10 ರ ಲ್ಲಿ ಒಂದು ಕಾಲು ದಾರಿಯಿದ್ದು ಆ ಕಾಲುದಾರಿಯ ಮುಖೇನ ನಮ್ಮ ಜಾಗಕ್ಕೆ ಹೋಗುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕಡೆಗೆ ಬರುವ ರಸ್ತೆ ಪಂಚಾಯಿತಿಯಿುಂದ ಡಾಂಬರ್ ಹಾಕಿರುವುದಿಲ್ಲ. ನಮ್ಮ ಕಡೆಗೆ ಹೋಗುವ ರಸ್ತೆ ಪಂಚಾಯಿತಿ ರಸ್ತೆ ಎಂದು ಹೇಳಲು ಯಾವುದೆ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ.

ಸದರಿ ರಸ್ತೆ ಅಗಲ 10–15 ಅಡಿ ಇರಬಹುದು , ಉದ್ದ ಊರು ಒಳಗಡೆ ಹೋಗುತ್ತದೆ. ಸದರಿ ರಸ್ತೆ ಕಾವೇರಿ ನದಿಗೆ ಹೋಗುವಂತಹ ರಸ್ತೆ ಎಂದರೆ ಸರಿ . ಯಾವ ವರ್ಷದಿಂದ ಸದರಿ ರಸ್ತೆ ಇರುತ್ತದೆ ಎಂದು ನನಗೆ ನೆನಪಿಲ್ಲ. 2019 ನೆ ಸಾಲಿನಲ್ಲಿ ನನ್ನ

ತೋಟದ ಸಿಲ್ವರ್ ಮರಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಈ ಕಡೆ ಕೆಲಸಕ್ಕೆ ಬಂದ ಮೇಲೆ ಪ್ರತಿವಾದಿಯರು ಕಡಿದು ಮಾರಾಟ ಮಾಡಿರುತ್ತಾರೆ ಎಂದು ನುಡಿದರು. ನಾನು ಸದರಿ ಮರಗಳನ್ನು ಸಾಗಿಸಲು ಪ್ರತಿವಾದಿಯರು ಅತಿಕ್ರಮ ಮಾಡಿ ಇರುವ ಆಸ್ತಿಯಲ್ಲಿ ಬಲವಂತವಾಗಿ ರಸ್ತೆ ಮಾಡಿಕೊಂಡು ಸಾಗಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೆ 6 ಅಡಿ ಇರುವ ರಸ್ತೆಯನ್ನು ಬಲವಂತವಾಗಿ 12 ಅಡಿ ರಸ್ತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಬಲವಂತವಾಗಿ ಪ್ರತಿವಾದಿಗಳು ಮರ ಕಡಿದ ಬಗ್ಗೆ ನಾನು ಪೋಲಿಸ್ ಠಾಣೆಯಲ್ಲಿ ಪುಕಾರನ್ನು ಕೊಟ್ಟಿರುತ್ತೇನೆ. ಪೋಲಿಸರು ಯಾವುದೆ ಕ್ರಮ ಕೈಗೊಂಡಿಲ್ಲ ಎಂದು ಅವರ ಮೇಲಾಧಿಕಾರಿಗಳಿಗೆ ನಾನು ಯಾವುದೆ ಪುಕಾರನ್ನು ಕೊಟ್ಟಿರುವುದಿಲ್ಲ. ಪ್ರತಿವಾದಿಯರು ಹರಿಜನ ಪಂಗಡಕ್ಕೆ ಸೇರಿದವರು ಎಂದರೆ ನನಗೆ ಗೊತ್ತಿಲ್ಲ. ನಾನು ಬಲವಂತವಾಗಿ ರಸ್ತೆ ಮಾಡಿದ ಕಾರಣ ಪ್ರತಿವಾದಿಯರು ಪ್ರಕರಣ ದಾಖಲಿಸುತ್ತಾರೆ ಎಂಬ ದುರುದ್ದೇಶದಿಂದ ನಾನು ಪೋಲಿಸ್ ಠಾಣೆಯಲ್ಲಿ ಪುಕಾರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದೆ ರೀತಿ ಪೋಲಿಸ್‌ರ ಮೇಲೆ ಪ್ರಭಾವ ಬೀರಿ ನಿಪಿ 12 ಮತ್ತು 13 ನ್ನು ಅನುಕೂಲಕ್ಕೆ ತಕ್ಕಂತೆ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ 105/19 ರಲ್ಲಿ ನನ್ನ ಆಸ್ತಿ 98 ಸೆಂಟ್ಸ ಇದ್ದು ಉಳಿಕೆ 2 ಸೆಂಟ್ಸ ಪ್ರತಿವಾದಿಯರದ್ದು ಎಂದರೆ ಸರಿ . ಸರ್ವೆ ನಂ 105/10 ರ ಆಸ್ತಿಯನ್ನು ಮತ್ತು ಸರ್ವೆ ನಂ 105/19 ರ ಉಳಿಕೆ ಆಸ್ತಿಯನ್ನು ಲಪಾಟೆಯಿಸುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಜಾಗದ 98 ಸೆಂಟ್ಸ ಸರ್ವೆ ಮಾಡಿಸಿರುತ್ತೇನೆ. ನಮ್ಮ ಜಾಗಕ್ಕೂ ಮತ್ತು ಪ್ರತಿವಾದಿಯರ ಜಾಗಕ್ಕೂ ಬೇಲಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಇದ್ದ ಬೇಲಿಯನ್ನು ಪ್ರತಿವಾದಿಯರು ಕಡೆದಿರುತ್ತಾರೆ ಎಂದು ನುಡಿದರು. ಈ ದಾವೆಯನ್ನು

ಪ್ರತಿವಾದಿಗಳು ನಮಗೆ ಕೊಟ್ಟ ಜಾಗವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರಿಂದ ಸಲ್ಲಿಸಿರುತ್ತೇನೆ. ದಿಃ 20.10.2019 ರಂದು ಪ್ರತಿವಾದಿಯರು ನಮ್ಮ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ನಾವೇ ಅವರ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೆ ರೀತಿ ನಾನು ದಿಃ 26.10.2019 ರಂದು ಪ್ರತಿವಾದಿಯರು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿ ಪ್ರತಿವಾದಿಗಳಿಗೆ ತೊಂದರೆ ಕೊಟ್ಟು ಅವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಂಬಂದಪಟ್ಟ ಇಲಾಖೆಯಿಂದ ಸರ್ವೆ ಮಾಡಿಸಿ ಹದ್ದುಬಸ್ತು ಕೂಡಿಸಿದರೆ ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿಯು ನನಗೆ ಒಪ್ಪಿಗೆ ಇರುವುದಿಲ್ಲ ಎಂದು ನುಡಿದರು. ಉಳಿದ 2 ಸೆಂಟ್ಸಗಳನ್ನು ನಾನು ಕಬಳಿಸಿರುವ ಉದ್ದೇಶದಿಂದ ನಾನು ಸಬಂಬಂದಪಟ್ಟ ಇಲಾಖೆಯಿುಂದ ಸರ್ವೆ ಮಾಡಿಸಲು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದಿಂದ ನನ್ನ ಪರವಾಗಿ ಆದೇಶವಾದರೆ ಸದರಿ ಆದೆಶೇವನ್ನು ಸರ್ವೆ ನಂ 105/10 ರ ವಿರುದ್ದ ಉಪಯೋಗಿಸಲು ಸಲುವಾಗಿ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ 105/10 ರ ಆಸ್ತಿ ಇರುವುದು ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ